ಅಸಲು ದಾವಾ ನಂ.252/2015

ಡಿ.ಡಬ್ಲ್ಯೂ-5

**ಸಾಕ್ಷಿಯನ್ನು ಇಂದು ದಿನಾಂಕಃ 21.07.2023 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಎಂ.ವಿ.ಇ. ವಕೀಲರಿಂದ.**

ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಒಂದು ಆಸ್ತಿಯನ್ನು ಖರೀದಿ ಮಾಡಿ ನೊಂದಾಯಿತ ದಾಖಲೆ ಮುಖಾಂತರ ಮಾಲೀಕನಾಗುತ್ತಾನೆ ಎಂದರೆ ಸಾಕ್ಷಿ ಮೌನವಾಗಿ ನಿಂತು ಉತ್ತರವನ್ನು ನೀಡುತ್ತಿಲ್ಲ. ನಾನು 1 ನೇ ಪ್ರತಿವಾದಿಗೆ ಮಾರಾಟ ಮಾಡಿದ ಜಮೀನು 1 ನೇ ವಾದಿಯ ಹಿರಿಯರ ಜಮೀನು ಎಂದರೆ ಸರಿ ಸಾಕ್ಷಿ ಮುಂದುವರೆದು ಅದು ಸಿದ್ದಪ್ಪ ತಂದೆ ಚಂದಪ್ಪರವರ ಭೂಮಿ ಎಂದು ಹೇಳುತ್ತಾರೆ. ಸಿದ್ದಪ್ಪ ತಂದೆ ಚಂದಪ್ಪರವರು ವಾದಿಯ ಹಿರಿಯರು ಎಂದರೆ ಸರಿ. ಯಾವುದಾದರೂ ಆಸ್ತಿ ಖರೀದಿ ಮಾಡುವಾಗ ನೊಂದಣಿ ಕಚೇರಿಯಲ್ಲಿ ಅದರ ಮಾರುಕಟ್ಟೆ ಮೌಲ್ಯ ಹೇಳುತ್ತಾರೆ ಎಂದರೆ ಸರಿ. ದಾವಾ ಆಸ್ತಿಗೆ 1978-79 ರ ಮುಂಚೆ ವಾದಿಯ ಹೆಸರಿನಲ್ಲಿ ಪಹಣಿ ಪತ್ರಿಕೆಗಳು ಇದ್ದವು ಎಂದರೆ ಸರಿ. ನಾನು ದಾವಾ ಆಸ್ತಿಯನ್ನು ವಾದಿಯಿಂದ ಖರೀದಿ ಮಾಡಿರುವುದಿಲ್ಲ, ಸಿದ್ದಪ್ಪ ತಂದೆ ಚಂದಪಪರವರಿಂದ ಖರೀದಿ ಮಾಡಿರುತ್ತೇನೆ. ನಾನು ರೂ.3000/- ಗಳಿಗೆ ದಾವಾ ಆಸ್ತಿಯನ್ನು ಸಿದ್ದಪ್ಪರವರಿಂದ ಖರೀದಿ ಮಾಡಿರುತ್ತೇನೆ. ನಾನು ಖರೀದಿ ಮಾಡಿದ ಆಸ್ತಿಯನ್ನು ನೊಂದಣಿ ಮಾಡಿಕೊಂಡಿರುತ್ತೇನೆ. ಸಿದ್ದಪ್ಪರವರ ಹೆಸರಿಗೆ ಪಹಣಿ ಇರಲಿಲ್ಲ ಎಂದರೆ ಸಾಕ್ಷಿ ಅಣ್ಣತಮ್ಮಂದಿರು ಪಾಲು ಆದಾಗ ದಾವಾ ಆಸ್ತಿ ಸಿದ್ದಪ್ಪರವರಿಗೆ ಬಂದಿರುತ್ತದೆ ಎಂದು ಹೇಳುತ್ತಾರೆ. ಪಾಲು ವಿಭಾಗದಲ್ಲಿ ದಾವಾ ಆಸ್ತಿ ಸಿದ್ದಪ್ಪರವರಿಗೆ ಹೋಗಿರುತ್ತದೆ ಎಂದು ನಾನು ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲ. ಪಾಲು ವಿಭಾಗದಲ್ಲಿ ದಾವಾ ಆಸ್ತಿ ಸಿದ್ದಪ್ಪರವರ ಹೆಸರಿಗೆ ಮ್ಯುಟೇಶನ ಆದ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ನಾನು ಖರೀದಿ ಮಾಡಿದ ಪ್ರಕಾರವೇ ನನ್ನ ಹಸರಿಗೆ ಹಕ್ಕು ಬದಲಾವಣೆ ಆದ ಬಗ್ಗೆ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ವಾದಿ ಚಾಲಕನಾಗಿ ಕೆಲಸ ಮಾಡುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಶಾಲೆ ಕಲಿತಿರುವುದಿಲ್ಲ ನನಗೆ ಗೊತ್ತಿಲ್ಲ. ವಾದಿ ಮಾದನ ಹಿಪ್ಪರಗಾ ಗ್ರಾಮದಲ್ಲಿ ವಾಹನ ಚಲಾಯಿಸಿಕೊಂಡು ಇರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಾನು 2015-16 ರಲ್ಲಿ ದಾವಾ ಆಸ್ತಿಯನ್ನು ಸಿದ್ದಪಪ ತಂದೆ ಚಂದಪ್ಪರವರಿಂದ ಖರೀದಿ ಮಾಡಿರುತೇನೆ. 2015-16 ರಲ್ಲಿ ಸಿದ್ದಪ್ಪ ತಂದೆ ಚಂದಪ್ಪರವರ ಹೆಸರಿನಲ್ಲಿ ದಾ ಆಸ್ತಿ ಇರಲಿಲ್ಲ ಎಂದರೆ ಸಾಕ್ಷಿ ಉತ್ತರ ನೀಡದೇ ಮೌನವಾಗಿ ನಿಲ್ಲುತ್ತಾರೆ. (ಸಾಕ್ಷಿ ಯಾವುದೇ ಪ್ರಶ್ನೆಗಳಿಗೆ ಉತ್ತರವನ್ನು ಸರಿಯಾಗಿ ನೀಡುತ್ತಿಲ್ಲ). ನಾನು 1 ನೇ ಪ್ರತಿವದಿಗೆ ದಾವಾ ಆಸ್ತಿಯನ್ನು 8-9 ಲಕ್ಷಕ್ಕೆ ಮಾರಾಟ ಮಾಡಿರುತ್ತೇನೆ. ದಾವಾ ಆಸ್ತಿ ಆಳಂದ ಕಲಬುರಗಿ ಹೋಗುವ ಹೆದ್ದಾರಿಗೆ ಹತ್ತಿಕೊಂಡು ಇರುತ್ತದೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಸಲ್ಲಿಸಿದ ಅಂಶಗಳು ಬಗ್ಗೆ ಮಾಹಿತಿ ಇರುತ್ತದೆಯೋ ಇಲ್ಲವೋ ಎಂದರೆ ಸಾಕ್ಷಿ ಉತ್ತರ ನೀಡುತ್ತಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದುಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಆಳಂದ.